# ಪರಂಪರೆಯ ಪ್ರತೀಕ – ಅನಂತ ಸೇವಾ ಉತ್ಸವ

ಅದಮ್ಯ ಚೇತನ ಸಂಸ್ಥೆಯು ಭಾರತೀಯ ಪರಂಪರೆಗನುಗುಣವಾಗಿ ಹೊಸ ವರ್ಷವನ್ನು ಸ್ವಾಗತಿಸುವ ಕಾರ್ಯಕ್ರಮವನ್ನು ವಿನೂತನವಾಗಿ ಮತ್ತು ಸಂಭ್ರಮೋತ್ಸಾಹಗಳೊಂದಿಗೆ ಅದಮ್ಯ ಸೇವಾ ಉತ್ಸವವಾಗಿ ಆಚರಿಸಿಕೊಂಡು ಬರುತ್ತಿದೆ. ಭಾರತದ ಸ್ವಾತಂತ್ರ್ಯದ ಅಮೃತಮಹೋತ್ಸವದ ಸಂದರ್ಭದಲ್ಲಿ ಈ ಬಾರಿಯ ಉತ್ಸವವನ್ನು ಅನಂತ ಸೇವಾ ಉತ್ಸವವನ್ನಾಗಿ 31/12/2022 ಮತ್ತು 01/01/2023ರಂದು ಗವಿಪುರದ ಮಗಜಿ ಧೋಂಡೂಸಾ ಸಭಾಂಗಣದಲ್ಲಿ ಸಂಭ್ರಮದಿಂದ ನಡೆಸಲಾಯಿತು.

31/12/2022ರ ಬೆಳಿಗ್ಗೆ ಹತ್ತು ಗಂಟೆಗೆ ಸಭಾಂಗಣದ ಹೊರಾಂಗಣದಲ್ಲಿ ಏರ್ಪಡಿಸಿದ್ದ 75 ಸ್ವಾತಂತ್ರ್ಯವೀರರ ಛಾಯಾಚಿತ್ರ ಮತ್ತು ವಿಡಿಯೋ ಪ್ರದರ್ಶನ; 75 ದೇವಾಲಯಗಳ ಛಾಯಾಚಿತ್ರ ಪ್ರದರ್ಶನ ಮತ್ತು 75 ಔಷಧೀಯ ಸಸ್ಯಗಳ ಪ್ರದರ್ಶಿನಿಗಳನ್ನು ಗಣ್ಯರು ಉದ್ಘಾಟಿಸಿದ ನಂತರ ವೇದಿಕೆಯ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರಾರ್ಥನೆ ಮತ್ತು ದೀಪ ಬೆಳಗುವ ಮೂಲಕ ವಿಧ್ಯುಕ್ತವಾಗಿ ಚಾಲನೆ ಪಡೆದುಕೊಂಡ ವೇದಿಕೆಯ ಕಾರ್ಯಕ್ರಮಗಳಲ್ಲಿ ತಮ್ಮ ದಿವ್ಯ ಸಾನ್ನಿಧ್ಯದ ಮೂಲಕ ಭಾಗವಹಿಸಿದ ಬೇಲಿಮಠದ ಶ್ರೀ ಶಿವರುದ್ರ ಮಹಾಸ್ವಾಮೀಜಿ, ಶ್ರೀ ಗೋಸಾಯಿ ಮಹಾ ಸಂಸ್ಥಾನ ಮಠದ ಶ್ರೀ ಶ್ರೀ ಶ್ರೀ ಮಂಜುನಾಥ ಭಾರತೀ ಮಹಾಸ್ವಾಮಿಗಳು ಮತ್ತು ಗವಿ ಗಂಗಾಧರೇಶ್ವರ ದೇವಾಲಯದ ಪ್ರಧಾನ ಅರ್ಚಕರಾದ ಶ್ರೀ ಸೋಮಸುಂದರ ದೀಕ್ಷಿತರು ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ, ಪ್ರೊ|| ಪಿ ವಿ ಕೃಷ್ಣಭಟ್, ಪ್ರಯೋಗ ಸಂಸ್ಥೆಯ ಸ್ಥಾಪಕ ಶ್ರೀ ಎಚ್. ಎಸ್. ನಾಗರಾಜ್, ಅನಂತಪಥ ಪತ್ರಿಕೆಯ ಸಂಪಾದಕ ಶ್ರೀ ಟಿ. ಎಸ್. ಗೋಪಾಲ್, ಅದಮ್ಯಚೇತನದ ಟ್ರಸ್ಟಿಗಳಾದ ಶ್ರೀ ಎಚ್. ಎನ್. ನಂದಕುಮಾರ್, ಶ್ರೀ ಪ್ರದೀಪ್ ಓಕ್ ಉಪಸ್ಥಿತರಿದ್ದರು.

ದಿನದ ಮತ್ತೋರ್ವ ಮುಖ್ಯ ಅತಿಥಿ, ಪದ್ಮಶ್ರೀ ಸಾಲುಮರದ ತಿಮ್ಮಕ್ಕ, ಅದಮ್ಯ ಚೇತನದ ಸಸ್ಯಾಗ್ರಹದಲ್ಲಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಹುರುಪು ತುಂಬಿದರು. ನಂತರ ನಡೆದ ವೇದಿಕೆಯ ಕಾರ್ಯಕ್ರಮದಲ್ಲಿ ಅವರನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಶ್ರೀಮತಿ ಪ್ರತಿಭಾ ಓಕ್ ಸನ್ಮಾನಿಸಿದರು.

ವೇದಿಕೆಯ ಕಾರ್ಯಕ್ರಮಗಳನ್ನು ಅನುಸರಿಸಿ ವಿವಿಧ ಸ್ಪರ್ಧೆಗಳು ಮತ್ತು ಮನರಂಜನಾ ಕಾರ್ಯಕ್ರಮಗಳು ಆಯೋಜಿತವಾಗಿದ್ದವು.

ಸಂಜೆ 5 ಗಂಟೆಗೆ ಕೇಂದ್ರ ಗೃಹಮಂತ್ರಿ ಶ್ರೀ ಅಮಿತ್ ಶಾ ಆಗಮಿಸಿ ಅದಮ್ಯ ಚೇತನದ ಶೂನ್ಯ ತ್ಯಾಜ್ಯ ಅಡುಗೆ ಮನೆ ವೀಕ್ಷಿಸಿ ಅದಮ್ಯ ಚೇತನದ ಚಟುವಟಿಕೆಗಳನ್ನು ಶ್ಲಾಘಿಸಿದರು. ನಂತರ ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ ಕನ್ನಡಕ್ಕೆ ಅನುವಾದಿತವಾಗಿರುವ "ಭಾರತದ ಆಗಸದಲ್ಲೊಂದು ರವಿತೇಜ – ತೇಜಸ್ ಯುದ್ಧ ವಿಮಾನ ಅಭಿವೃದ್ಧಿಯ ಯಶೋಗಾಥೆ" ಎಂಬ ಪುಸ್ತಕವನ್ನು ಲೋಕಾರ್ಪಣೆ ಮಾಡಿದರು. ಈ ಪುಸ್ತಕವನ್ನು ರಕ್ಷಣಾ ಇಲಾಖೆ ವೈಜ್ಞಾನಿಕ ಮಾಹಿತಿ ಮತ್ತು ದಾಖಲೆ ಕೇಂದ್ರ (DESIDOC) ಪ್ರಕಟಿಸಿದೆ.

ನಂತರ ಸುಮಾರು ಒಂದು ಗಂಟೆಯ ಕಾಲ ಪ್ರೊ. ಕೃಷ್ಣೇಗೌಡರಿಂದ ಹಾಸ್ಯರಸಧಾರೆ ಹರಿದ "ಹಾಸ್ಯ ಸಂಜೆ" ಕಾರ್ಯಕ್ರಮ, ತದನಂತರ, ಶ್ರೀ ಆನೂರು ಅನಂತಕೃಷ್ಣ ಶರ್ಮ, ಶ್ರೀ ಯಶಸ್ವಿ ಮತ್ತು ಸಂಗಡಿಗರಿಂದ ತಾಳವಾದ್ಯ ಕಾರ್ಯಕ್ರಮಗಳು ಎಲ್ಲರನ್ನೂ ರಂಜಿಸಿದವು. ರಾತ್ರಿ 8:30ಕ್ಕೆ

ಶ್ರೀ ಕೃಷ್ಣ ಸಂಪಗಾಂವ್ಕರ್, “ಬಾರೂಡ” ಎಂಬ ವಿಶೇಷ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ದಿನದ ಕೊನೆಯ ವಿಶೇಷ ಕಾರ್ಯಕ್ರಮವಾಗಿ “ಮಾರುತಿ ಪ್ರತಾಪ” ಎಂಬ ಪ್ರಸಂಗವನ್ನು ಪ್ರಸಿದ್ಧ ಯಕ್ಷಗಾನ ಕಲಾವಿದ ಶ್ರೀ ಕೆರೆಮನೆ ಶಿವಾನಂದ ಹೆಗಡೆ ಮತ್ತು ಸಂಗಡಿಗರು ಪ್ರಸ್ತುತ ಪಡಿಸಿದರು. ಮಧ್ಯರಾತ್ರಿ 12 ಗಂಟೆಗೆ ಸರಿಯಾಗಿ ಪ್ರಕೃತಿ, ಪರಿಸರ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಕೆಲಸಮಾಡುವ ಸಂಕಲ್ಪವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಬೋಧಿಸಿದರು. ಸಾಮೂಹಿಕ ವಂದೇ ಮಾತರಂ ಗಾಯನದ ಮೂಲಕ ಹೊಸ ವರ್ಷಕ್ಕೆ ಸ್ವಾಗತ ಕೋರಲಾಯಿತು. ಇದರೊಂದಿಗೆ ಪ್ರಥಮ ದಿನದ ಕಾರ್ಯಕ್ರಮವೂ ಮುಕ್ತಾಯವಾಯಿತು.

ಅಕ್ಕಲಕೋಟೆ ಸಮರ್ಥ ಮಹಾರಾಜರ ಪಾದುಕೆಗಳು ಅದಮ್ಯಚೇತನ ಸಂಸ್ಥೆಗೆ ಆಗಮಿಸಿದ ಶುಭ ಶಕುನದೊಂದಿಗೆ ಹೊಸ ವರ್ಷ ಪ್ರಾರಂಭವಾಯಿತು. ದಿವ್ಯ ಪಾದುಕೆಗಳಿಗೆ ಪೂಜೆ ಮಾಡಿ, ವಂದಿಸಿ ಎಲ್ಲ ಕಾರ್ಯಕರ್ತರೂ ಪುನೀತರಾದರು. ನಂತರ ಶಿವಪುರಿಯ ವಿಶ್ವ ಫೌಂಡೇಶನ್ ಅಧ್ಯಕ್ಷರೂ, ಪ್ರಸಿದ್ಧ ಅಧ್ಯಾತ್ಮ ಗುರುಗಳೂ ಆದ  ಡಾ. ಪುರುಷೋತ್ತಮ್ ರಾಜಿಮ್‌ವಾಲೆ ಉದ್ಬೋಧಕ ಉಪನ್ಯಾಸ ನೀಡಿದರು.

ಮಧ್ಯಾಹ್ನ ಮೂರು ಗಂಟೆಯ ವರೆಗೆ ಅನೇಕ ಸ್ಪರ್ಧೆಗಳು ಮತ್ತು ಶಾಲಾ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳು ನಡೆದವು. ಬಾಲಕಿಯೊಬ್ಬಳು ನೀಡಿದ ಯೋಗನೃತ್ಯವು ಸಭಾಸದರನ್ನು ಬೆರಗುಗೊಳಿಸಿತು. ಮೂರು ಗಂಟೆಗೆ ಅನಂತಕುಮಾರ್ ಪ್ರತಿಷ್ಠಾನದ ಎ-ಚಾಟ್ ಮಾಸಿಕ ಕಾರ್ಯಕ್ರಮದ ಅಡಿಯಲ್ಲಿ ಎರಡು ವರ್ಷಕ್ಕೇ ವಿಶ್ವದಾಖಲೆ ನಿರ್ಮಿಸಿರುವ ಪುಟ್ಟ ಬಾಲಕಿ, ಸ್ವರಾ ಅರ್ವಾಳಿಂದ ಪ್ರತಿಭಾ ಪ್ರದರ್ಶನ ಮತ್ತು ನೃತ್ಯಪಟು ಕುಮಾರಿ ಸುಷ್ಮಾ ಸಿ ಎಲ್ ಅವರಿಂದ ಮನಮೋಹಕ ನೃತ್ಯಪ್ರದರ್ಶನ.

ನಾಲ್ಕು ಗಂಟೆಗೆ ಡಾ. ಪದ್ಮಿನಿ ಓಕ್ ಅವರಿಂದ ಮೈನವಿರೇಳಿಸುವ ದೇಶಭಕ್ತಿಗೀತೆಗಳ ಗಾಯನ. ಕೊನೆಯಲ್ಲಿ ರಾಮನಾಮ ಸ್ಮರಣೆಯ ಜೊತೆಗೆ ರಾಮಜನ್ಮಭೂಮಿ ನ್ಯಾಸದ ಸದಸ್ಯರೂ, ಪೇಜಾವರ ಮಠಾಧೀಶರೂ ಆದ ಶ್ರೀ ಶ್ರೀ ವಿಶ್ವಪ್ರಸನ್ನ ಸ್ವಾಮೀಜಿಯವರಿಗೆ ಸ್ವಾಗತ. ಶ್ರೀಗಳ ಸನ್ನಿಧಿಯಲ್ಲಿ ಗೀತಸಮರ್ಪಣೆ ಕಾರ್ಯಕ್ರಮ, ನೂರಾರು ಕಂಠಗಳಿಂದ ಅಖಂಡ ವಂದೇ ಮಾತರಂ ಗಾಯನ, ಶ್ರೀಗಳ ಅಮೃತಹಸ್ತದಿಂದ ಅದಮ್ಯ ಚೇತನದ ದಿನಚರಿಯ ಬಿಡುಗಡೆ, ಕೊನೆಯಲ್ಲಿ ಶ್ರೀಗಳಿಂದ ಅನುಗ್ರಹ ಭಾಷಣ, ಇವೆಲ್ಲವೂ ಎರಡು ದಿನಗಳ ಉತ್ಸವಕ್ಕೆ ಕಳಶಪ್ರಾಯವಾಗಿದ್ದವು.

ದಿನದ ಕೊನೆಗೆ, ಪ್ರಶಸ್ತಿ ವಿಜೇತರಿಗೆ ಬಹುಮಾನ ವಿತರಣೆ, ವಿವಿಧ ಸ್ಪರ್ಧೆಗಳ ತೀರ್ಪುಗಾರರಿಗೆ ಸನ್ಮಾನಗಳ ಮೂಲಕ ಎರಡು ದಿನಗಳ ಸಂಭ್ರಮ ತೆರೆಕಂಡಿತು.

ಉತ್ಸವದಲ್ಲಿ ವಿವಿಧ ಸ್ಪರ್ಧೆಗಳು, ಪ್ರದರ್ಶಿನಿಗಳು, ಸಸ್ಯಾಗ್ರಹ, ಮನರಂಜನಾ ಕಾರ್ಯಕ್ರಮಗಳು, ಬೀದಿ ನಾಟಕಗಳು, ವಂದೇ ಮಾತರಂ ಗಾಯನ ಮುಂತಾದ ಚಟುವಟಿಕೆಗಳ ಜೊತೆಗೆ ಅನೇಕ ಪರಿಸರ ಸ್ನೇಹಿ ಉತ್ಪನ್ನಗಳ ಮಾರಾಟ ಮಳಿಗೆಗಳೂ ಇದ್ದವು.